ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಅಕಾ/ಕೇಕ/ಸಂ/ವಾ-1/1797/20-21 ದಿನಾಂಕ:09.02.2021

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 809/2021**

**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

**ವಿಷಯ:** ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಮತ್ತು ನಿರ್ವಹಣೆ ಬಗ್ಗೆ.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ದಿ:26.07.2017.
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 794/2018 ದಿ:09.08.2018.
3. ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಮತ್ತು ನಿರ್ವಹಣೆ ಕುರಿತಂತೆ ಹೊರಡಿಸಲಾಗಿರುವ ಇತರೆ ಪೂರಕ ಸುತ್ತೋಲೆಗಳು.

-&-

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಸಾರ್ವಜನಿಕ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗೂ ನಿಗಮದ ಸಾರಿಗೇತರ (ವಾಣಿಜ್ಯ) ಆದಾಯವನ್ನು ಹೆಚ್ಚಿಸುವ ದೃಷ್ಟಿಯಿಂದ ಬಸ್ ನಿಲ್ದಾಣಗಳಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ನಡೆಸಲು ಖಾಸಗಿ ಕಂಪನಿ / ವ್ಯಕ್ತಿಗಳಿಗೆ / ಸರ್ಕಾರಿ / ಅರೆಸರ್ಕಾರಿ ಇಲಾಖೆಗಳಿಗೆ ಮಾಸಿಕ ಪರವಾನಗಿ ಶುಲ್ಕ ಪಾವತಿ ಆಧಾರದಲ್ಲಿ ಪರವಾನಗಿ ನೀಡಲು ಕ್ರಮ ಕೈಗೊಳ್ಳುತ್ತಿರುವುದು ಸರಿಯಷ್ಟೆ. ಪರವಾನಗಿದಾರರ ಆಯ್ಕೆಗೆ ಹಲವು ಪ್ರಯತ್ನಗಳನ್ನು ನಡೆಸಿದ್ದಾಗ್ಯೂ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಸಾಕಷ್ಟು ವಾಣಿಜ್ಯ ಮಳಿಗೆಗಳು ದೀರ್ಘಕಾಲದಿಂದ ಖಾಲಿ ಇರುತ್ತವೆ. ಇದಲ್ಲದೆ, ಕೋವಿಡ್-19ರ ಪರಿಣಾಮ ಮತ್ತು ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪರವಾನಗಿದಾರರನ್ನು ಆಕರ್ಷಿಸಲು ಅನುವಾಗುವಂತೆ, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-787/2017, 794/2018 ಮತ್ತು ಪೂರಕ ಆದೇಶ / ಸುತ್ತೋಲೆಗಳಲ್ಲಿನ ಹಾಲಿ ನಿಯಮಾವಳಿಗಳನ್ನು ವಾಸ್ತವಿಕ ನೆಲಗಟ್ಟಿನಲ್ಲಿ ಬದಲಾವಣೆ ಮಾಡುವ ಕುರಿತು ದಿನಾಂಕ 21-12.2020 ರಂದು ನಡೆದ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಕೆಳಕಂಡಂತೆ ನಿಯಮಾವಳಿಗಳನ್ನು ಮಾರ್ಪಾಡು ಮಾಡಲಾಗಿರುತ್ತದೆ.

| ಜಿ.ಎಸ್.ಓ / ಸುತ್ತೋಲೆ ಸಂಖ್ಯೆ / ಕ್ರ.ಸಂ. | ಹಾಲಿ ಇರುವ ನಿಯಮಾವಳಿ | ಮಾರ್ಪಾಡಿತ ನಿಯಮಾವಳಿ |
|---|---|---|
| GSO-787/2017; I.1- ಮಿತವ್ಯಯ ಪರವಾನಗಿ ಶುಲ್ಕ. | 1. **ಹೊಸ ಮಳಿಗೆಗಳಿಗೆ;** ಭೂಮಿಯ ಹಾಗೂ ಕಟ್ಟಡದ ಮಾರುಕಟ್ಟೆ ಮೌಲ್ಯದ ಒಟ್ಟಾರೆ ಮೊತ್ತದ ಶೇ.15 ರಷ್ಟು ಮೊತ್ತವನ್ನು ವಾರ್ಷಿಕ ಮಿತವ್ಯಯ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸುವುದು. | ಪ್ರಸ್ತುತ ಕಾಮಗಾರಿ ಇಲಾಖೆಯಿಂದ ಲೋಕೋಪಯೋಗಿ (ಪಿಡಬ್ಲ್ಯೂಡಿ) ಇಲಾಖೆಯ ನಿಯಮಾವಳಿಯಂತೆ ಭೂಮಿಯ ಹಾಗೂ ಕಟ್ಟಡದ ಮಾರುಕಟ್ಟೆ ಮೌಲ್ಯದ ಒಟ್ಟಾರೆ ಮೊತ್ತದ ಶೇ.15 ರಷ್ಟು ಮೊತ್ತವನ್ನು ವಾರ್ಷಿಕ ಮಿತವ್ಯಯ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸುವುದು. ಹೀಗೆ ನಿಗದಿಪಡಿಸುವಾಗ, ಬಸ್ ನಿಲ್ದಾಣದ ಸುತ್ತಮುತ್ತ ಇರುವ ಮಾರುಕಟ್ಟೆ ದರಗಳನ್ನು ಪರಿಶೀಲಿಸಿಕೊಂಡು ಕಡಿಮೆ ಮಾಸಿಕ ಪರವಾನಗಿ ಶುಲ್ಕ ನಿಗದಿಯಾದಲ್ಲಿ |

| | | |
|---|---|---|
| | | ಶೇ.25ರಷ್ಟು ಹೆಚ್ಚಿಸಲು ಮತ್ತು ಹೆಚ್ಚಿನ ಪರವಾನಗಿ ಶುಲ್ಕ ನಿಗದಿಯಾದಲ್ಲಿ ಶೇ.25 ರಷ್ಟು ಕಡಿಮೆಗೊಳಸಲು ವಿಭಾಗದ ಮಟ್ಟದಲ್ಲಿ ಸಮಾಲೋಚಿಸಿ, ಕೇಂದ್ರ ಕಛೇರಿಯ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆಯುವುದು. |
| GSO-787/2017; I.3- ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ. | 3. ಒಂದು ವೇಳೆ ಟೆಂಡರ್‌ನಲ್ಲಿ ಹೊಸದಾಗಿ ಆಯ್ಕೆಯಾದ ಪರವಾನಗಿದಾರರು ಒಂದು ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಂಡಲ್ಲಿ, ಹಿಂದಿನ ಟೆಂಡರ್‌ಗೆ ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕವನ್ನೇ ಹೊಸ ಟೆಂಡರ್‌ಗೆ ಪರಿಗಣಿಸುವುದು. | ಒಂದು ವೇಳೆ ಟೆಂಡರ್‌ನಲ್ಲಿ, ನಿಗದಿತ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕಕ್ಕಿಂತ ಅತೀ ಹೆಚ್ಚಿನ ಮೊತ್ತ ನಮೂದಿಸಿ, ಹೊಸದಾಗಿ ಆಯ್ಕೆಯಾದ ಪರವಾನಗಿದಾರರು ಎರಡು ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಂಡಲ್ಲಿ, ಈ ಹಿಂದಿನ ಟೆಂಡರ್‌ಗೆ ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕವನ್ನೇ ಹೊಸದಾಗಿ ಕರೆಯುವ ಟೆಂಡರ್‌ಗೆ ಪರಿಗಣಿಸುವುದು. |

| | ಕ್ರ. ಸಂ. | ಮಳಿಗೆ ಮಾದರಿ/ಸ್ಥಳ | ಪರವಾನಗಿ ಅವಧಿ | |
|---|---|---|---|---|
| GSO-787/2017; IV –ಪರವಾನಗಿ ಅವಧಿ. ಮತ್ತು GSO-794/2018. | 1 | ತೆರೆದ ಸ್ಥಳದಲ್ಲಿನ ಮಳಿಗೆಗಳು | 3 ವರ್ಷಗಳು | 1. ತೆರೆದ ಸ್ಥಳದ ಮಳಿಗೆಗಳಿಗೆ ಹಾಲಿ 03 ವರ್ಷಗಳ ಪರವಾನಗಿ ಅವಧಿಯಲ್ಲಿ ಯಾವುದೇ Defaulter ಆಗಿರದೆ, ಮಳಿಗೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ, 4ನೇ ವರ್ಷದಲ್ಲಿ ಶೇ 15% ರಷ್ಟು ಹಾಗೂ ತದನಂತರ ಪ್ರತಿ ವರ್ಷ ಶೇ.10ರಷ್ಟು ಪರವಾನಗಿ ಶುಲ್ಕ ಹೆಚ್ಚಳದೊಂದಿಗೆ ತೆರೆದ ಸ್ಥಳದ ವಾಣಿಜ್ಯ ಮಳಿಗೆಗಳಿಗೆ 03 ವರ್ಷಗಳ ಅವಧಿಗೆ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸುವುದು.(03+03). |
| | 2 | ಕಟ್ಟಿದ ಮಳಿಗೆಗಳು | 5 ವರ್ಷಗಳು | 2. ಮೇಲ್ಕಂಡಂತೆ ನವೀಕರಣಕ್ಕೆ ಪರವಾನಗಿದಾರರು ಇಚ್ಛಿಸಿದಲ್ಲಿ, 06 ತಿಂಗಳು ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ಬಗ್ಗೆ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದ್ದು, ನವೀಕರಣದ ಸಮಯದಲ್ಲಿ ಕೇಂದ್ರ ಕಛೇರಿಯ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆಯಬೇಕು. |
| | | ಉಪಹಾರಗೃಹ | 5 ವರ್ಷಗಳು + 5 ವರ್ಷಗಳ ನವೀಕರಣ | |
| | 3 | ಡಾರ್ಮಿಟರಿ / ಲಾಡ್ಜಿಂಗ್ / ಕಛೇರಿ ಉದ್ದೇಶಕ್ಕಾಗಿ / ಮೊಬೈಲ್ ಟವರ್ಸ್ | 10 ವರ್ಷಗಳು | 3. ಉಳಿದಂತೆ ಪರವಾನಗಿ ಅವಧಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. |

| | | |
|---|---|---|
| GSO-787/2017; VI.1-ಇ-ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ. | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಇಸಂಗ್ರ 2009 ದಿನಾಂಕ 09.10.2012 ರಲ್ಲಿನ ನಿರ್ದೇಶನಗಳಂತೆ, ರೂ.5.00 ಲಕ್ಷಗಳಿಗೆ (ಐದು ಲಕ್ಷ ರೂಪಾಯಿಗಳು) ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯನ್ನು ಸಂಗ್ರಹಣಾ ಸಂಸ್ಥೆಗಳು (all procurement entities) ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ಸಂಗ್ರಹಿಸಲು ಆದೇಶವಿರುತ್ತದೆ. ಅದರನ್ವಯ ನಿಗಮವು ವಾಣಿಜ್ಯ ಮಳಿಗೆಗಳಿಗೆ ಟೆಂಡರ್ ಕರೆಯುವಾಗ ಒಂದು ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸುವ ಮಳಿಗೆಗಳ ಪರವಾನಗಿ ಅವಧಿಯ ಶುಲ್ಕದ ಒಟ್ಟಾರೆ ಮೌಲ್ಯ ರೂ.5.00 ಲಕ್ಷ ಮೀರಿದಲ್ಲಿ ಅಥವಾ ಕಾಲಕಾಲಕ್ಕೆ ಪರಿಷ್ಕರಿಸಿದಂತೆ ಅಂತಹ ಟೆಂಡರ್ ಪ್ರಕಟಣೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯ ಮೂಲಕ ಕರೆಯಲು ಕ್ರಮ ಕೈಗೊಳ್ಳುವುದು. | 1) ಒಂದು ಮಳಿಗೆ / ಉಪಹಾರಗೃಹ / ಇತರೆ ಎಲ್ಲಾ ರೀತಿಯ ಮಳಿಗೆಯ ಒಟ್ಟಾರೆ ಪರವಾನಗಿ ಪೂರ್ತಿ ಅವಧಿಯಲ್ಲಿ ವಾರ್ಷಿಕ ಶೇಕಡವಾರು ಹೆಚ್ಚಳವನ್ನು ಒಳಗೊಂಡಂತೆ ಪೂರ್ಣ ಅವಧಿಗೆ ಒಟ್ಟಾರೆ ಪರವಾನಗಿ ಶುಲ್ಕವು ರೂ.5.00 ಲಕ್ಷಗಳಿಗೆ ಮೀರಿದಲ್ಲಿ ಅಂತಹ ಮಳಿಗೆ / ಉಪಹಾರಗೃಹ / ಇತರೆ ಎಲ್ಲಾ ರೀತಿಯ ಮಳಿಗೆಗಳಿಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡುವುದು.<br>2) ಒಂದು ಮಳಿಗೆ / ಉಪಹಾರಗೃಹದ / ಇತರೆ ಎಲ್ಲಾ ರೀತಿಯ ಮಳಿಗೆಯ ಒಟ್ಟಾರೆ ಪರವಾನಗಿ ಅವಧಿಯಲ್ಲಿ ವಾರ್ಷಿಕ ಶೇಕಡವಾರು ಹೆಚ್ಚಳವನ್ನು ಒಳಗೊಂಡಂತೆ ಪೂರ್ಣ ಅವಧಿಗೆ ಒಟ್ಟಾರೆ ಪರವಾನಗಿ ಶುಲ್ಕವು ರೂ.5.00 ಲಕ್ಷಗಳಿಗೆ ಮೀರದಿದ್ದಲ್ಲಿ ಅಂತಹ ಮಳಿಗೆ / ಉಪಹಾರಗೃಹ / ಇತರೆ ಎಲ್ಲಾ ರೀತಿಯ ಮಳಿಗೆಗಳಿಗೆ ಈ ಹಿಂದಿನಂತೆ ಮ್ಯಾನ್ಯುಯಲ್ ಟೆಂಡರ್ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡುವುದು.<br>3) ಜಿಲ್ಲಾ ಮತ್ತು ಬೆಂಗಳೂರು ವ್ಯಾಪ್ತಿಯ ಬಸ್ ನಿಲ್ದಾಣಗಳ ಎಲ್ಲಾ ರೀತಿಯ ಮಳಿಗೆಗಳಿಗೆ ಹಾಲಿ ಇರುವ ನಿಯಮದಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡುವುದು.<br>4) ಹೋಬಳಿ ಮತ್ತು ಗ್ರಾಮಾಂತರ ವ್ಯಾಪ್ತಿಯ ಬಸ್ ನಿಲ್ದಾಣಗಳ ಎಲ್ಲಾ ರೀತಿಯ ಮಳಿಗೆಗಳಿಗೆ ಮ್ಯಾನ್ಯುಯಲ್ ಟೆಂಡರ್ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡುವುದು. |
| GSO-794/2018; -ಇ-ಟೆಂಡರ್/ ಮ್ಯಾನ್ಯುಯಲ್ ಸಂಧಾನ ಪ್ರಕ್ರಿಯೆಯಲ್ಲಿ ಅನುಸರಿಸಬೇಕಿರುವ ಕ್ರಮಗಳು. | ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆಗಾಗಿ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ನಿಗದಿಪಡಿಸಿ, 03 ಬಾರಿ ಇ-ಟೆಂಡರ್ ನಡೆಸುವುದು. | ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆಗಾಗಿ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ನಿಗದಿಪಡಿಸಿ, 02 ಬಾರಿ ಇ-ಟೆಂಡರ್ / 02 ಬಾರಿ ಮ್ಯಾನ್ಯುಯಲ್ ಟೆಂಡರ್ ನಡೆಸುವುದು. |
| | ಮೂರು ಬಾರಿ ಇ-ಟೆಂಡರ್ ನಂತರ, ಪರವಾನಗಿದಾರರು ಆಯ್ಕೆಯಾಗುವವರೆಗೂ ಮ್ಯಾನ್ಯುಯಲ್ ಸಂಧಾನ ಮುಂದುವರೆಸುವುದು | 1. ಎರಡು ಬಾರಿ ಇ-ಟೆಂಡರ್ ಅಥವಾ 02 ಬಾರಿ ಮ್ಯಾನ್ಯುಯಲ್ ಟೆಂಡರ್ ನಡೆಸಿದ ನಂತರ ಖಾಲಿಯಿರುವ ಮಳಿಗೆಗಳಿಗೆ 02 ಬಾರಿ ಸಂಧಾನ ನಡೆಸುವುದು.<br>2.ತದನಂತರ ಖಾಲಿಯಿರುವ ಮಳಿಗೆಗಳಿಗೆ ನಿಗದಿತ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ನಮೂದಿಸದೆ(with out ELF) ಸಂಧಾನ ನಡೆಸುವುದು. |

| | | |
|---|---|---|
| GSO-787/2017; XI.4-ಪರವಾನಗಿದಾರರ ಆಯ್ಕೆ ವಿಧಾನ | ಇ–ಟೆಂಡರ್ / ಮ್ಯಾನ್ಯುಯಲ್ ಸಂಧಾನದಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H1 ಮತ್ತು H2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. | ಪರವಾನಗಿದಾರರಾಗಿ ಆಯ್ಕೆಯಾದ H1 ಮತ್ತು H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ ನಿಗದಿತ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಬಿಡ್ ಮಾಡಿದ H3 ಬಿಡ್‌ದಾರರನ್ನು ಸಹ ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. |
| GSO-787/2017; XII.2-ಕರಾರು ಒಪ್ಪಂದ. | ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 **ದಿನಗಳೊಳಗಾಗಿ** ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು. | ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ **15 ದಿನಗಳಿಗೆ ಮೀರದಂತೆ** ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು. |
| GSO-787/2017; XVI.2-ಹೆಚ್ಚುವರಿ ಸ್ಥಳಾವಕಾಶ | 1.ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.10 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.<br><br>2.ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳಿಗೆ ಹೆಚ್ಚುವರಿ ಸ್ಥಳಾವಕಾಶ ಅನ್ವಯಿಸುವುದಿಲ್ಲ. | 200 ಚ.ಅ. ವಿಸ್ತೀರ್ಣದ ಒಳಗಿನ ಮಳಿಗೆಗಳನ್ನು ಒಳಗೊಂಡಂತೆ ಸ್ಥಳಾವಕಾಶ ಲಭ್ಯತೆಗೆ ಅನುಗುಣವಾಗಿ ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.20 ರಷ್ಟು ಹೆಚ್ಚುವರಿ ಸ್ಥಳಾವಕಾಶವನ್ನು ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚದುರಡಿ ಪರವಾನಗಿ ಶುಲ್ಕದ 1.5 ಪಟ್ಟು (ಪ್ರೋರೇಟಾ) ಮೊತ್ತವನ್ನು ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್ / ವ್ಯವಹಾರ ಮಾಡಲು ಅವಕಾಶ ಇರುವುದಿಲ್ಲ. |

| | | |
|---|---|---|
| GSO-787/2017; XVIII.4 (Circular No.1425/2018) -ಅನಧಿಕೃತ ವ್ಯವಹಾರಕ್ಕೆ ದಂಡ ವಿಧಿಸುವ ಬಗ್ಗೆ. | ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ವಸ್ತು / ವ್ಯವಹಾರ ಹೊರತುಪಡಿಸಿ, ಪೂರ್ವಾನುಮತಿ ಪಡೆಯದೆ ಇತರೆ / ಅನಧಿಕೃತ ವ್ಯವಹಾರ ಮಾಡಿದಲ್ಲಿ ಮೊದಲ ಪ್ರಕರಣಕ್ಕೆ ರೂ.1000/-, 2ನೇ ಪ್ರಕರಣಕ್ಕೆ ರೂ.2,000/- ಮತ್ತು 3ನೇ ಪ್ರಕರಣ / ಪುನರಾರ್ವತನೆಯಾದಲ್ಲಿ ರೂ.5000/- ದಂಡ ವಿಧಿಸುವುದು + ಕರಾರನ್ನು ರದ್ದು ಪಡಿಸುವುದು. | ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ವಸ್ತು / ವ್ಯವಹಾರ ಹೊರತುಪಡಿಸಿ, ಪೂರ್ವಾನುಮತಿ ಪಡೆಯದೆ ಇತರೆ / ಅನಧಿಕೃತ ವ್ಯವಹಾರ ಮಾಡಿದಲ್ಲಿ ಮೊದಲ ಪ್ರಕರಣಕ್ಕೆ ರೂ.1000/-, 2ನೇ ಪ್ರಕರಣಕ್ಕೆ ರೂ.2,000/- ಮತ್ತು 3ನೇ ಪ್ರಕರಣ / ಪುನರಾರ್ವತನೆಯಾದಲ್ಲಿ ರೂ.5000/- ದಂಡ ವಿಧಿಸುವುದು + ಕರಾರನ್ನು ರದ್ದು ಪಡಿಸುವ ನಿಯಮವನ್ನು ಉಪಹಾರಗೃಹ / ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಗೆ ಅಳವಡಿಸುವುದು. |
| GSO-787/2017; XXVII.5-ಶುಲ್ಕ ರಹಿತ ಅವಧಿ. | ಉಪಹಾರ ಗೃಹಕ್ಕೆ ಪ್ರತಿ 5 ವರ್ಷಗಳಗೊಮ್ಮೆ ಕಾಮಗಾರಿ / ದುರಸ್ತಿ ಕೆಲಸಗಳಗಾಗಿ, 15 ದಿನಗಳ ಶುಲ್ಕರಹಿತ ಅವಧಿಯೆಂದು ಪರಿಗಣಿಸುವುದು. ಸದರಿ ಅವಧಿಯನ್ನು ಒಟ್ಟಾರೆ ಕರಾರಿನ ಅವಧಿಗೆ ಸೇರಿಸಿಕೊಳ್ಳುವುದು. ಈ ಅವಧಿಯಲ್ಲಿ ವ್ಯವಹಾರ ನಡೆಸಬಾರದು. ವ್ಯವಹಾರ ನಡೆಸಿದಲ್ಲಿ, ಪರವಾನಗಿ ಶುಲ್ಕವನ್ನು ವಿಧಿಸುವುದು. | ಉಪಹಾರಗೃಹ / ಲಾಡ್ಜ್ / ಡಾರ್ಮೆಟರಿ / ಕಛೇರಿ ಸ್ಥಳಾವಕಾಶದ ಮಳಿಗೆಗಳಗೆ ಹೊಸದಾಗಿ ಆಯ್ಕೆಯಾಗುವ ಪರವಾನಗಿದಾರರಿಗೆ ಕಾಮಗಾರಿ / ದುರಸ್ಥಿ ಕೆಲಸಗಳಗೆ ಒಂದು ತಿಂಗಳ ಶುಲ್ಕ ರಹಿತ ಅವಧಿಯೆಂದು ಪರಿಗಣಿಸುವುದು. ಸದರಿ ಅವಧಿಯನ್ನು ಒಟ್ಟಾರೆ ಕರಾರಿನ ಅವಧಿಗೆ ಸೇರಿಸಿಕೊಳ್ಳುವುದು. ಈ ಅವಧಿಯಲ್ಲಿ ವ್ಯವಹಾರ ನಡೆಸಿದಲ್ಲಿ, ಪರವಾನಗಿ ಶುಲ್ಕವನ್ನು ವಿಧಿಸುವುದು. |
| GSO-787/2017; XXVIII.2, 3. –ಕರಾರು ರದ್ದತಿ ಷರತ್ತುಗಳು. | 2. ಪರವಾನಗಿ ಪಡೆದ ಅವಧಿಯಿಂದ ಒಂದು ವರ್ಷದ ಒಳಗೆ ಪರವಾನಗಿದಾರರು, 6 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.<br>3. ಒಂದು ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 4 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು. | 2.1: ಹೊಸದಾಗಿ ಆಯ್ಕೆಯಾದ ಪರವಾನಗಿದಾರರು ಕನಿಷ್ಠ 02 ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.<br>2.2: ಒಂದು ವೇಳೆ 02 ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 06 ತಿಂಗಳ ಮುಂಗಡ ನೋಟೀಸ್ ನೀಡಬೇಕು. ಮುಂಗಡ ನೋಟೀಸ್ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟೀಸ್ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಲು ಅವಕಾಶ ನೀಡುವುದು.<br>2.3 ಎರಡು ವರ್ಷದೊಳಗೆ ಪರವಾನಗಿ ರದ್ದತಿ ಮಾಡಿಕೊಳ್ಳುವ ಪರವಾನಗಿದಾರರ ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಕಪ್ಪುಪಟ್ಟಿಗೆ ಸೇರಿಸುವ ಷರತ್ತುಗಳನ್ನು ವಿಧಿಸುವುದು.<br>3. ಎರಡು ವರ್ಷದ ನಂತರ ಕರಾರು ರದ್ದತಿ ಮಾಡಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 04 ತಿಂಗಳ ಮುಂಗಡ ನೋಟೀಸ್ ನೀಡಲು, ಸದರಿ 04 ತಿಂಗಳು ಮಳಿಗೆಯನ್ನು ನಡೆಸಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಲು ಅವಕಾಶ ನೀಡುವುದು. |

| | | |
|---|---|---|
| GSO-787/2017; XXXIII.<br>–ವಾಣಿಜ್ಯ ಮಳಿಗೆಗಳ ದಾಖಲಾತಿ ನಿರ್ವಹಣೆ ಮತ್ತು ಮಾಸಿಕ ಪರವಾನಗಿ ಶುಲ್ಕ ವಸೂಲಾತಿಗೆ ವಹಿಸುವ ಕ್ರಮಗಳು. | 1. ಮಳಗೆಗಳ ಕ್ರಮ ಸಂಖ್ಯೆ, ಪರವಾನಗಿದಾರರ ಹೆಸರು, ಮಳಗೆಯಲ್ಲಿ ನಡೆಸುವ ವ್ಯವಹಾರ, ಮಾಸಿಕ ಪರವಾನಗಿ ಶುಲ್ಕ ಹಾಗೂ ಪರವಾನಗಿ ಅವಧಿಯ ವಿವರಗಳನ್ನು ನೋಂದಣಿ ಪುಸ್ತಕದಲ್ಲಿ ದಾಖಲಿಸಿ, ಪ್ರತಿ ತಿಂಗಳು ಸಂದಾಯವಾದ ಪರವಾನಗಿ ಶುಲ್ಕವನ್ನು ವಾಹನ ನಿಲ್ದಾಣದಲ್ಲಿನ ಮೇಲ್ವಿಚಾರಕರು ನಿರ್ವಹಿಸಲಾಗುವ ನೋಂದಣಿ ಪುಸ್ತಕದಲ್ಲಿ (ಮಾಸ್ಟರ್ ಕಂಟ್ರೋಲ್ ರಿಜಿಸ್ಟರ್) ದಿನಾಂಕದೊಂದಿಗೆ ದಾಖಲಿಸುವುದು.<br>2. ವಿಭಾಗೀಯ ವಾಣಿಜ್ಯ ಶಾಖೆಯಲ್ಲಿಯೂ ಸಹ ಸದರಿ ನೋಂದಣಿ ಪುಸ್ತಕವನ್ನು (ಮಾಸ್ಟರ್ ಕಂಟ್ರೋಲ್ ರಿಜಿಸ್ಟರ್) ನಿರ್ವಹಿಸುವುದು.<br>3. ಬಸ್ ನಿಲ್ದಾಣಕ್ಕೆ ಮೇಲಾಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ, ನಿಲ್ದಾಣ ಮೇಲ್ವಿಚಾರಕರು ಸದರಿ ನೋಂದಣಿ ಪುಸ್ತಕವನ್ನು (ಮಾಸ್ಟರ್ ಕಂಟ್ರೋಲ್ ರಿಜಿಸ್ಟರ್) ಪರಿವೀಕ್ಷಣೆಗಾಗಿ ತಪ್ಪದೇ ಮಂಡಿಸುವುದು.<br>4. ಬಸ್ ನಿಲ್ದಾಣಕ್ಕೆ ಮೇಲಾಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ, ನಿಲ್ದಾಣ ಮೇಲ್ವಿಚಾರಕರು ಸದರಿ ನೋಂದಣಿ ಪುಸ್ತಕವನ್ನು (ಮಾಸ್ಟರ್ ಕಂಟ್ರೋಲ್ ರಿಜಿಸ್ಟರ್) ಪರಿವೀಕ್ಷಣೆಗಾಗಿ ತಪ್ಪದೇ ಮಂಡಿಸುವುದು. | ಹಾಲಿ ಇರುವ ನಿಯಮಾವಳಿಗಳ ಜೊತೆಗೆ ಕ್ರ.ಸಂ.-5 ಮತ್ತು 06ನ್ನು ಕೆಳಕಂಡಂತೆ ಸೇರ್ಪಡೆಗೊಳಸಲಾಗಿದೆ.<br>5. ಘಟಕದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಮೇಲ್ವಿಚಾರಕರು ಆಯಾ ಘಟಕದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಗೆಗಳ ಕುರಿತು ಮಾಸ್ಟರ್ ಕಂಟ್ರೋಲರ್ ರಿಜಿಸ್ಟರ್(ನೊಂದಣಿ ಪುಸ್ತಕ)ನ್ನು ನಿರ್ವಹಿಸುವುದು ಮತ್ತು ಘಟಕಕ್ಕೆ ಮೇಲಾಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಸದರಿ ನೋಂದಣಿ ಪುಸ್ತಕವನ್ನು (ಮಾಸ್ಟರ್ ಕಂಟ್ರೋಲ್ ರಿಜಿಸ್ಟರ್) ಪರಿವೀಕ್ಷಣೆಗಾಗಿ ತಪ್ಪದೇ ಮಂಡಿಸುವುದು.<br>6. ಘಟಕದಲ್ಲಿ ಕರ್ತವ್ಯ ನಿರ್ವಹಿಸುವ ಲೆಕ್ಕಪತ್ರ ಮೇಲ್ವಿಚಾರಕರು ಆಯಾ ಘಟಕದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಗೆಗಳ ಪರವಾನಗಿದಾರರಿಂದ ಮಾಸಿಕ ಪರವಾನಗಿ ಶುಲ್ಕವನ್ನು ನಿಗದಿತ ಅವಧಿಯೊಳಗೆ ವಸೂಲಾತಿಗಾಗಿ ಕ್ರಮವಹಿಸುವುದು. |
| GSO-787/2017; XXXV.18(ಹೊಸ ಸೇರ್ಪಡೆ)<br>–ವಾಣಿಜ್ಯ ಮಳಿಗೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ. | | ತೆರೆದ ಸ್ಥಳದಲ್ಲಿ ಗುರುತಿಸಿರುವ ಮಳಗೆಗಳ ಪೈಕಿ 02 ಇ-ಟೆಂಡರ್ ಅಥವಾ 02 ಮ್ಯಾನುಯಲ್ ಟೆಂಡರ್ ಮತ್ತು 02 ಬಾರಿ ಸಂಧಾನದ ನಂತರವೂ ಖಾಲಿ ಉಳದಲ್ಲಿ, ಮುಂದೆ ಬೇಡಿಕೆ ಬಂದಾಗ ಪರಿಗಣಿಸುವ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ಖಾಲಿಯಿರುವ ವಾಣಿಜ್ಯ ಮಳಗೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ ಸೂಕ್ತ ಶಿಫಾರಸ್ಸಿನೊಂದಿಗೆ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆಯುವುದು. |
| Cicular-1515/2019.<br>-ತಾತ್ಕಾಲಿಕ ಕಿಯೋಸ್ಕ್ ಬಗ್ಗೆ. | ಬಸ್ ನಿಲ್ದಾಣಗಳಲ್ಲಿ ತಾತ್ಕಾಲಿಕ ಕಿಯೋಸ್ಕ್ ಅಳವಡಿಕೆಗೆ ಮನವಿಗಳು ಬಂದಾಗ ಸ್ಥಳಾವಕಾಶದ ಲಭ್ಯತೆ ಮತ್ತು ಸೂಕ್ತ ಷರತ್ತುಗಳನ್ವಯ ಅನುಮತಿಸಲು ವಿಭಾಗೀಯ ನಿಯಂತ್ರಣಾಧಿಕಾರಿಗಳಗೆ ಅಧಿಕಾರ | ಬಸ್ ನಿಲ್ದಾಣ / ಘಟಕ / ಇತರೆ ಸ್ಥಳಗಳಲ್ಲಿ ತಾತ್ಕಾಲಿಕ ಕಿಯೋಸ್ಕ್ ಅಳವಡಿಕೆಗೆ ಮನವಿಗಳು ಬಂದಾಗ ಸುತ್ತೋಲೆ-1515/2019ರಲ್ಲಿನ ನಿಯಮ & ಷರತ್ತುಗಳನ್ವಯ ಸ್ಥಳಾವಕಾಶದ ಲಭ್ಯತೆಗೆ ಅನುಗುಣವಾಗಿ ಅನುಮತಿಸುವ ಅಧಿಕಾರವನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಗೆ ನೀಡಲಾಗಿದೆ. |

ಉಳಿದಂತೆ ಜಾರಿಯಲ್ಲಿರುವ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 787/2017 ಮತ್ತು 794/2018 ಹಾಗೂ ಪೂರಕ ಸುತ್ತೋಲೆ / ಆದೇಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸದರಿ ಆದೇಶವು ಕೂಡಲೇ ಜಾರಿಗೆ ಬರುತ್ತದೆ. ಆದೇಶ ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
**ವ್ಯವಸ್ಥಾಪಕ ನಿರ್ದೇಶಕರು**
**ಕರಾರಸಾ ನಿಗಮ**

**ಪ್ರತಿಯನ್ನು:**

1) ಮಾನ್ಯ ಅಧ್ಯಕ್ಷರ / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ), ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.